**SPL.C. 5136/2024**
ಚಾ.ಸಾ **:3** ಪ್ರಾ.ಸಾ **:3**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ಬಸವರಾಜ |
| ತಂದೆ ಹೆಸರು | : | ಶೇಖರಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಿಳಾಸ | : | ಈ.ಜೆ.ಉದ್ಬಾಳ |

ಸಾಕ್ಷಿಗೆ ದಿನಾಂಕ **26-11-2025** ರಂದು ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯವಿಚಾರಣೆ **:** ಮಾನ್ಯ ಸರ್ಕಾರಿ ಅಭಿಯೋಜಕರಿಂದ **:**</u>

ನಾನು ಚಲುವಾದಿ ಜಾತಿಗೆ ಸೇರಿರುತ್ತೇನೆ. ಅದು ಪರಿಶಿಷ್ಟ ಜಾತಿಯಲ್ಲಿ ಬರುತ್ತದೆ. ಈ ಕೇಸಿನ ಎಲ್ಲಾ ಆರೋಪಿತರು ಕುರುಬ ಜನಾಂಗಕ್ಕೆ ಸೇರಿದ್ದಾರೆ.

2. ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 08-30 ಗಂಟೆಗೆ ಚಾ.ಸಾ1 ಈತನು ಗೋಡ್ವಾನ ಹತ್ತಿರ ಹೋಗಿದ್ದನು. ಬೆಳಿಗ್ಗೆ 08-30 ಗಂಟೆಗೆ ನಾನು ನನ್ನ ಮನೆಯಲ್ಲಿ ಊಟ ಮಾಡುತ್ತಿದ್ದಾಗ, ನನ್ನ ಅಣ್ಣನನ್ನು ಬಡಿಯುತ್ತಿದ್ದಾರೆ ಎಂದು ಯಮುನಮ್ಮ ನನಗೆ ತಿಳಿಸಿದ್ದಳು. ಕಾರಣ ನಾನು ಗೋಡ್ವಾನ್ ಹತ್ತಿರ ಓಡಿ ಹೋಗಿದ್ದೆನು.

3. ಅಲ್ಲಿ ಸುಮಾರು 20 ಜನರು ಚಾ.ಸಾ1 ಮತ್ತು 2 ಇವರನ್ನು ಕೆಳಗೆ ಕೆಡುವಿದ್ದರು ಮತ್ತು ಅವರನ್ನು ಬಡಿಯುತ್ತಿದ್ದರು. ಆ 20 ಜನರಲ್ಲಿ ಈ ಕೇಸಿನ ಆರೋಪಿತರು ಇದ್ದರು. (ಎಲ್ಲಾ ಆರೋಪಿತರು ಗೈರು ಹಾಜರಿದ್ದಾರೆ. ಅವರನ್ನು ಗುರುತಿಸುವ ಕುರಿತು ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿತರ ಪರವಾಗಿ ಎಮ್. ಎಸ್. ಬಿ. ವಕೀಲರು ಬಿ.ಬಿ.ಎ. ವಕೀಲರ ಪರವಾಗಿ ತಿಳಿಸಿರುತ್ತಾರೆ.)

4. ನಾನು ಜಗಳ ಬಿಡಿಸಲು ಹೋಗಿದ್ದೆನು. ಚಾ.ಸಾ1 ಈತನ ಕಿವಿಗೆ ಮತ್ತು ಚಾ.ಸಾ2 ಇವಳ ತೊಡೆಗೆ ರಕ್ತದ ಗಾಯಗಳು ಆಗಿದ್ದವು.

5. ನಾನು ಯಾವ ಕಾರಣಕ್ಕಾಗಿ ಎಂದು 20 ಜನರನ್ನು ಪ್ರಶ್ನೆ ಮಾಡಿದಾಗ, 4 ನೇ ಆರೋಪಿ ಮತ್ತು 20 ನೇ ಆರೋಪಿತರು ನನ್ನನ್ನು ಕಟ್ಟಿಗೆಯಿಂದ ತಲೆಗೆ ಬಡಿದಿದ್ದಾರೆ. ನನಗೆ ಪೆಟ್ಟು ಬಿದ್ದಿತ್ತು. ಮೂರ್ಛೆ ಹೋಗಿ ಬಿದ್ದಿದ್ದೆನು.

6. ನನ್ನನ್ನು ಬಡಿದ ನಂತರ, ಚಾ.ಸಾ4 ಮತ್ತು 5 ಇವರು ಆ ಸ್ಥಳಕ್ಕೆ ಬಂದಿದ್ದರು. ಆಗ

ಎಲ್ಲಾ ಆರೋಪಿತರು ಚಾ.ಸಾ4 ಮತ್ತು 5 ಇವರನ್ನು ಬ್ಯಾಗಾರ ಸೂಳೆ ಎಂದು ಬೈದಿದ್ದಾರೆ ಮತ್ತು ಅವರನ್ನು ದಬ್ಬಾಡಿದ್ದಾರೆ.

7. ಹುಲ್ಲೇಶ, ಆನಂದ ಮತ್ತು ಮೌನೇಶ ಜಗಳವನ್ನು ಬಿಡಿಸಿದ್ದಾರೆ. ಆನಂತರ ನಾನು, ಚಾ.ಸಾ1, 2, 4 ಮತ್ತು 5 ಸೇರಿಕೊಂಡು ಪೊಲೀಸ್ ಠಾಣೆಗೆ ಹೋಗಿದ್ದೇವು. ಪೊಲೀಸರು ಸರಕಾರಿ ಆಶ್ಪತ್ರೆಗೆ ದಾಖಲ ಆಗಲು ತಿಳಿಸಿದ್ದರು. ಕಾರಣ ನಾವೆಲ್ಲರೂ ಸರಕಾರಿ ಆಸ್ಪತ್ರೆಯಲ್ಲಿ ದಾಖಲ ಆಗಿದ್ದೆವು. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿದ್ದಾರೆ. ನಾನು, ಚಾ.ಸಾ1, 2, 4 ಮತ್ತು 5 ಸಿಂಧನೂರಿನ ಸರಕಾರಿ ಆಸ್ಪತ್ರೆಯಲ್ಲಿ ಎರಡು ದಿನಗಳವರೆಗೆ ಒಳರೋಗಿಗಳು ಆಗಿದ್ದೇವು.

ಪಾಟೀ ಸವಾಲು**: 1** ರಿಂದ **20** ನೇ ಆರೋಪಿ ಪರ ವಕೀಲರಿಂದ**:**

ಆರೋಪಿತರ ಪರವಾಗಿ ಎಮ್. ಎಸ್. ಬಿ. ವಕೀಲರು ಸಮಯ ಕೋರಿದ್ದಾರೆ. ಯಾವುದೇ ಸಕಾರಣ ಇಲ್ಲದೆ ಇರುವುದರಿಂದ ಅವರ ವಿನಂತಿಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ರಾಯಚೂರು ಪೀಠ ಸಿಂಧನೂರು